# ಜೇಡರ ದಾಸಿಮಯ್ಯ

ಎಸ್.ಎಸ್. ರಮೇಶ್

*ಬಸವಣ್ಣನವರು ತಮ್ಮ ಹಿರಿಯರ ವಚನಗಳನ್ನು 'ತವರಾಜನೊರೆತೆರೆ' (ತವರಾಜ = ಒಂದು ಬಗೆಯ ಸಕ್ಕರೆ) ಎಂದು ಕೊಂಡಾಡಿದ್ದಾರೆ. ಅಂತಹ ಆದ್ಯವಚನಕಾರರಲ್ಲಿ ಒಬ್ಬರಾದ ಜೇಡರ ದಾಸಿಮಯ್ಯನ ಒಂದೆರಡು ವಚನಗಳ ಮಹತ್ವವನ್ನು ತಿಳಿಸಿಕೊಟ್ಟಿರುವ ಶ್ರೀ ಎಸ್.ಎಸ್. ರಮೇಶ್ ಅವರು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡದ ಹಿರಿಯ ಉಪನ್ಯಾಸಕರೂ ಹಾಗೂ ಹವ್ಯಾಸಿ ಬರಹಗಾರರೂ ಆಗಿದ್ದಾರೆ.*



ಸಾಕಷ್ಟು ಸಮಯ ತೆಗೆದುಕೊಂಡು, ಅಪಾರ ಪರಿಶ್ರಮದಿಂದ ನೇಯ್ದಿದ್ದ, ಅಪೂರ್ವವಸ್ತ್ರವನ್ನು ಸಂತೆಗೆ ಮಾರಲು ಹೋದ ನೇಕಾರನಿಗೆ, ಎದುರಿಗೆ ಕಂಡದ್ದು, ಚಳಿಯಿಂದ ನಡುಗುತ್ತಿರುವ ಜಂಗಮ. ಆ ನೇಕಾರ ಬಡವ; ಆದರೆ, ಭಕ್ತ. ತಡಮಾಡದೆ ಆ ವಿಶೇಷವಸ್ತ್ರವನ್ನು ಜಂಗಮನಿಗೆ ಹೊದಿಸಿ ಧನ್ಯತೆಯ ಭಾವವನ್ನು ಹೊಂದಿದ. ಭಕ್ತರಲ್ಲಿ ಭಗವಂತನನ್ನು ಕಂಡ ಆ ಮಹಾನ್ ಶಿವಶರಣನೇ ಜೇಡರ ದಾಸಿಮಯ್ಯ. ಕ್ರಿ.ಶ. ಸುಮಾರು ೧೦೭೬-೧೧೫೦ರಲ್ಲಿ ಇದ್ದ ಜೇಡರ ದಾಸಿಮಯ್ಯ ಗುಲ್ಬರ್ಗ ಜಿಲ್ಲೆಯ ಮುದನೂರಿಗೆ ಸೇರಿದವ. 'ರಾಮನಾಥ' ಎಂಬ ಅಂಕಿತದಲ್ಲಿ, ಸುಮಾರು ನೂರೈವತ್ತು ವಚನಗಳನ್ನು ಬರೆದಿರುವ ದಾಸಿಮಯ್ಯನ ಪತ್ನಿ ದುಗ್ಗಳೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನಸಾಹಿತ್ಯಕ್ಕೆ ಇರುವ ವಿಶೇಷ ಸ್ಥಾನ, ಬೆಲೆಯನ್ನು ವಿದ್ವಾಂಸರು ವಿಮರ್ಶಕರು ಗುರುತಿಸಿರುವ ಸಂಗತಿ ಈಚಿನದಲ್ಲ. ಕಾವ್ಯಗುಣ ಮತ್ತು ಶ್ರೇಷ್ಠ ಚಿಂತನೆಗಳಿಂದ ಕೂಡಿರುವ ದಾಸಿಮಯ್ಯನ ವಚನಗಳು ಮುಂದಿನ ವಚನಕಾರರ ಮೇಲೆ ದಟ್ಟ ಪ್ರಭಾವ ಬೀರಿವೆ.

ಭಗವಂತನ ಅನುಗ್ರಹಕ್ಕೆ ಪಾತ್ರರಾಗುವುದು ಸುಲಭದ ಮಾತಲ್ಲ. ಪರಶಿವ ತನ್ನ ಶರಣರನ್ನು ಆತುಕೊಳ್ಳುವ ಮುಂಚೆ ಹತ್ತು ಹಲವು ಕಠಿಣ ಪರೀಕ್ಷೆಗಳಿಗೆ ಒಳಪಡಿಸುತ್ತಾನೆ. ಅಂತಿಮವಾಗಿ ಉಳಿಯುವುದು ದೃಢಭಕ್ತಿ ಮಾತ್ರ.

*ಪರ ತನ್ನ ಭಕ್ತರ ತಿರಿವಂತೆ ಮಾಡುವ*
*ಒರೆದು ನೋಡುವ ಮಿಸುನಿಯ ಚಿನ್ನದಂತೆ*
*ಅರೆದು ನೋಡುವ ಚಂದನದಂತೆ*
*ಅರಿದು ನೋಡುವ ಕಬ್ಬಿನ ಕೋಲಿನಂತೆ*
*ಬೆದರದೆ ಬೆಚ್ಚದೆ ಇರ್ದಡೆ*
*ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.*

ಹರಿಹರನ ರಗಳೆಯಲ್ಲಿ ಬರುವ ಶಿವಭಕ್ತರ ಕಥೆಗಳನ್ನು ನೋಡಿದಾಗ ಮೇಲಿನ ವಚನದ ಸ್ವಾರಸ್ಯ ತಿಳಿಯುತ್ತದೆ. ವ್ಯಾವಹಾರಿಕ ಉದ್ದೇಶಗಳಿಗಾಗಿ, ಭಕ್ತಿತೋರುವ ತೋರಿಕೆಯ ಭಕ್ತರನ್ನು ದಾಸಿಮಯ್ಯ ವಿಡಂಬನೆಯಿಂದ ಹಂಗಿಸುತ್ತಾನೆ.

*ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ*
*ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ*
*ಕಳವೆಯೆಲ್ಲ ಹೋಗಿ ಬರಿಗೋಣಿ ಉಳಿಯಿತ್ತು*
*ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ*

ಈ ಮೇಲಿನ ವಚನವನ್ನು ಹಿರಿಯ ವಿದ್ವಾಂಸರಾದ ಡಾ. ಕೆ. ಅನಂತರಾಮು ಅವರು ಹೀಗೆ ಅರ್ಥೈಸಿದ್ದಾರೆ : "ಅಳಿಮನವೆಂಬ ಹರಿದ ಚೀಲದಲ್ಲಿ ಭಕ್ತಿಯೆಂಬ ಧಾನ್ಯವನ್ನು ತುಂಬಿಕೊಂಡು ನಾನೂ ಭಕ್ತನೆಂದು ಬೀಗುತ್ತಾ ನಡೆದರೆ ಅಲ್ಪಕಾಲದಲ್ಲಿಯೇ ಭಕ್ತಿಧಾನ್ಯವೆಲ್ಲವೂ ಕಪಟ, ಅಹಂಕಾರ, ಚಿತ್ತಚಾಂಚಲ್ಯ, ವಿಷಯಾಸಕ್ತಿಗಳೆಂಬ ರಂಧ್ರಗಳ ಮೂಲಕ ಸೋರಿ ಹೋಗುತ್ತವೆ ಎಂದಿದ್ದಾನೆ."

ದಾಸಿಮಯ್ಯನ ವಚನಗಳು ಗಾತ್ರದಿಂದ ಚಿಕ್ಕವು. ಆದರೆ ಎಲ್ಲ ವರ್ಗದವರಿಗೂ ಅರ್ಥವಾಗುವ ಭಾಷೆ. ಪರಿಚಿತವಾದ ಹೋಲಿಕೆಗಳು ಹಾಗೂ ಆಳವಾದ ಚಿಂತನೆಯಿಂದ ಕೂಡಿವೆ. ಬಾಹ್ಯದೃಷ್ಟಿಗೆ ಗೋಚರಿಸಿದ್ದು ಮಾತ್ರ ದಿಟ, ಪಂಚೇಂದ್ರಿಯಗಳ ಮೂಲಕ ದಕ್ಕಿದ್ದು ಮಾತ್ರ ಸತ್ಯ ಎನ್ನುವ ಆತುರ, ಅಪ್ರಬುದ್ಧ ದೃಷ್ಟಿಯನ್ನು ದಾಸಿಮಯ್ಯ ತಿರಸ್ಕರಿಸುತ್ತಾನೆ.

*ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ*
*ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ*
*ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ*
*ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ ರಾಮನಾಥ.*

ಕನ್ನಡನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿದ ಶಿವಶರಣರು ಮತ್ತು ಹರಿದಾಸರು ನಮ್ಮ ಎದುರಿನ

ಬದುಕಿನಿಂದ ಪಲಾಯನ ಮಾಡಲು ಬೋಧಿಸಲಿಲ್ಲ. ಈ ಲೋಕದ ಕಾರ್ಪಣ್ಯಗಳನ್ನು ಸಮರ್ಥವಾಗಿ ಎದುರಿಸಿ ಹಸನಾಗಿ ಬದುಕಲು ದಾರಿತೋರಿದ್ದಾರೆ. ದಾಸಿಮಯ್ಯನಿಗೆ ಬಡತನ ಓದಿದ ಸುದ್ದಿಯಲ್ಲ, ಅನುಭವಿಸಿದ ಬವಣೆ. ಲೋಕದಲ್ಲಿ ಸಾಮಾನ್ಯನು ತನ್ನ ಮೂಲ ಅವಶ್ಯಕತೆಗಳಿಗೆ ದೈನಂದಿನ ಜೀವನದಲ್ಲಿ ಹೇಗೆ ಪರಿತಪಿಸುತ್ತಾನೆ ಎಂದು ತಿಳಿದಿದೆ. ಆದ್ದರಿಂದ ದಾಸಿಮಯ್ಯ ತನ್ನ ವಚನವೊಂದರಲ್ಲಿ ಹಸಿವಿನ ಅನುಭವವನ್ನು ವಿಷವೇರಿದ್ದಕ್ಕೆ ಹೋಲಿಸಿ ಅನ್ನವೊಂದೇ ಆ ವಿಷಕ್ಕೆ ಮದ್ದು ಎನ್ನುತ್ತಾನೆ. ಈ ಜಗತ್ತಿನ ಕಷ್ಟಗಳನ್ನು ಕಾಣಲು ನೀನು ನನ್ನ ಹಾಗೆ ಒಮ್ಮೆ ಮಾನವದೇಹ ಧರಿಸು ಎಂದು ಪರಮಾತ್ಮನಿಗೆ ಸವಾಲು ಒಡ್ಡುತ್ತಾನೆ.

ಸಮಾಜದಲ್ಲಿನ ಅಶಾಂತಿ ಅಸಮಾನತೆಗಳಿಗೆ ಕಾರಣವಾಗಿರುವ ಲಿಂಗಭೇದ, ಜಾತಿ, ಮತ ಭೇದಗಳನ್ನು ದಾಸಿಮಯ್ಯ ಖಂಡಿಸುತ್ತಾನೆ. ಜನರ ಜೀವನ ಸುಖ ಸಮಾಧಾನಗಳಿಂದ ಕೂಡಿರಬೇಕೆಂಬ ಹಂಬಲವಿರುವ ದಾಸಿಮಯ್ಯನ ನುಡಿಗಳು ಕೆಲವೊಮ್ಮೆ ಹರಿತವೆನಿಸಿದರೂ ಆತನ ಹಂಬಲ ಮೆಚ್ಚತಕ್ಕದ್ದು. ಕರ್ನಾಟಕದಲ್ಲಿ ನಡೆದ ಹನ್ನೆರಡನೇ ಶತಮಾನದ ಆಂದೋಲನದ ಕೇಂದ್ರವ್ಯಕ್ತಿ ಬಸವಣ್ಣ, ಇಡೀ ಶರಣಕುಲಕ್ಕೇ ಗುರುಸ್ಥಾನದಲ್ಲಿದ್ದ ಅಲ್ಲಮಪ್ರಭು, ಸಮಾಜವನ್ನು ದಿಟ್ಟವಾಗಿ ಎದುರಿಸಿ ನಿಂತ ಅಕ್ಕಮಹಾದೇವಿ—ಹೀಗೆ ಹಲವು ವಚನಕಾರರು ತಮ್ಮ ವಿಶಿಷ್ಟತೆಗಳಿಂದ 'ವಚನ ಚಳುವಳಿ'ಯನ್ನು ಅರ್ಥಪೂರ್ಣಗೊಳಿಸಿದರು. ವಚನಸಾಹಿತ್ಯ ಎಂಟುನೂರು ವರ್ಷಗಳಾದರೂ ತನ್ನ ಪ್ರಖರತೆಯನ್ನು ಕಳೆದುಕೊಳ್ಳದೆ ಉಜ್ವಲವಾಗಿರುವಲ್ಲಿ ಆದ್ಯವಚನಕಾರನಾದ ಜೇಡರ ದಾಸಿಮಯ್ಯನ ಕೊಡುಗೆ ಸಾಮಾನ್ಯವಲ್ಲ.

❑

# ಸತ್ಯಸಂಶೋಧಕರು

**ಕೆ. ಲೀಲಾವತಿ**

*ಸತ್ಯದ ವಿವಿಧ ಆಯಾಮಗಳ ವೈಚಾರಿಕ ಪರಿಚಯವನ್ನು ಮಾಡಿಕೊಡುವ ಈ ಲೇಖನ ಖ್ಯಾತ ಅನುಭಾವಿಗಳೂ ಹಾಗೂ ಅಧ್ಯಾತ್ಮ ಪಿಪಾಸುಗಳಿಗೆ ಮಾರ್ಗದರ್ಶಿಗಳೂ ಆಗಿರುವ ಬಿಜಾಪುರದ ಪೂಜ್ಯ ಶ್ರೀಸಿದ್ಧೇಶ್ವರ ಸ್ವಾಮಿಗಳ ವಿಚಾರ ಹಾಗೂ ಉಪನ್ಯಾಸಗಳಿಂದ ಪ್ರಭಾವಿತವಾಗಿದೆ. ಲೇಖಕಿ ಕೆ. ಲೀಲಾವತಿಯವರು ಮೈಸೂರಿನ ನಿವಾಸಿಗಳೂ ಹಾಗೂ ಆಶ್ರಮದ ಭಕ್ತರೂ ಆಗಿದ್ದಾರೆ.*

'ಸತ್ಯ' ಎಂಬ ಪದವು 'ಸತ್' ಅಂದರೆ ಇರುವಿಕೆ ಎಂಬ ಧಾತುವಿನಿಂದ ಬಂದಿದೆ. ವಸ್ತುತಃ ಸತ್ಯವನ್ನು ಬಿಟ್ಟು ಬೇರೇನೂ ಇಲ್ಲ, ಇರುವುದೂ ಇಲ್ಲ. ಆ ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಒಬ್ಬೊಬ್ಬರದು ಒಂದೊಂದು ಬಗೆಯಾಗಿರುತ್ತದೆ. ಸತ್ಯವೆಂಬುದು ಸಾರ್ವಭೌಮ ತತ್ತ್ವ, ಅಸಂಖ್ಯಾತವಾದ ಅನೇಕ ತತ್ತ್ವಗಳು ಅದರಲ್ಲಿ ಅಡಗಿವೆ.

ನಮಗೆ ಏನೇನು ಕಾಣಿಸುತ್ತದೊ ಅದಷ್ಟೇ ಸತ್ಯ, ಏನೇನು ಕೇಳಿಸುತ್ತದೊ ಅದೇ ಸತ್ಯ ಎಂದು ಹೇಳಲಾಗುವುದಿಲ್ಲ. ಅದು ನಿಜವಾಗಿಯೂ ಸತ್ಯವೇ ಎನ್ನುವುದನ್ನು ಪರಾಮರ್ಶೆಗೆ ಒಳಪಡಿಸಬೇಕಾಗುತ್ತದೆ. ಸತ್ಯವನ್ನು ಕಾಣುವ ಮನೋವಿಕಾಸವಾದರೂ ಎಲ್ಲರಲ್ಲೂ ಒಂದೇ ಪರಿಯಾಗಿರುವುದಿಲ್ಲ, ಸತ್ಯ ಹಾಗೇ ತಿಳಿಯುವ ಹಾಗಿದ್ದರೆ ಎಲ್ಲರೂ ಸತ್ಯದರ್ಶಿಗಳಾಗಿರುತ್ತಿದ್ದರು. ಕೋಟಿ ಕೋಟಿ ಜನರಿದ್ದಾರೆ, ಆದರೆ ಒಂದೇ ಸತ್ಯ ಒಬ್ಬರಿಗೆ ಕಂಡಂತೆ ಮತ್ತೊಬ್ಬರಿಗೆ ಕಂಡಿಲ್ಲ. ಅಲ್ಲದೆ ಒಬ್ಬನ ಸತ್ಯ ಇನ್ನೊಬ್ಬನಿಗೆ ಅಸತ್ಯವೆನಿಸಬಹುದು. ವಿಶೇಷ ಶರಣತೆ ಹಾಗೂ ಸಮರ್ಪಣೆ ಇಲ್ಲದವರಾರಿಗೂ ಸತ್ಯ ಗೋಚರಿಸುವುದಿಲ್ಲ. ಸತ್ಯದರ್ಶಿಗಳು ತಾವೇನು ಕಂಡರೊ ಅದನ್ನು ಶಬ್ದಗಳ ಮಧ್ಯೆ ಹಿಡಿದಿಟ್ಟರು. ಅಂತಹ ಸತ್ಯದ ಶಬ್ದಗಳನ್ನು ಮಂತ್ರಗಳು, ವಚನಗಳು, ಸೂಳ್ನುಡಿ, ವೈಜ್ಞಾನಿಕ ಸೂತ್ರಗಳು ಎಂದೆಲ್ಲಾ ಕರೆದರು. ಇದು ಯಾರ ಶಬ್ದವೇ ಆಗಿರಲಿ, ಯಾವುದೇ ಶಬ್ದವಾಗಿರಲಿ, ಅದು ತನ್ನ ಅರ್ಥದೊಳಗೆ ಸತ್ಯದ ಮುಖವನ್ನು ತೋರಿಸುತ್ತದೆ. ವ್ಯಕ್ತಿಯ ನಿರ್ಮಾಣ ಆಗಬೇಕಿದ್ದರೆ, ಮನಸ್ಸಿನಲ್ಲಿ ಶಾಂತಿಯ ಸುಗಂಧ ಸೂಸಬೇಕಿದ್ದರೆ ಸತ್ಯದ ದರ್ಶನ ಆಗಬೇಕಾಗುತ್ತದೆ.

**ಸತ್ಯವು ಯಾವ ಸಮಾಜಕ್ಕೂ, ಅದು ಪುರಾತನವಾಗಲಿ ಆಧುನಿಕವಾಗಲಿ, ಗೌರವ ಸಲ್ಲಿಸುವುದಿಲ್ಲ. ಸಮಾಜವು ಸತ್ಯಕ್ಕೆ ಮನ್ನಣೆ ತೋರಬೇಕು, ಇಲ್ಲವೆ ಅಳಿಯಬೇಕು.**

*—ಸ್ವಾಮಿ ವಿವೇಕಾನಂದ*

ಸತ್ಯ ಅಪಾತ್ರರಿಗಾಗಲೀ, ದಡ್ಡರಿಗಾಗಲೀ ಸಹಜಸುಲಭವಾಗಿ ಕೈಗೆ ಎಟಕುವಂತಹುದಲ್ಲ. ಇಂತಹ ಸತ್ಯದರ್ಶನಕ್ಕಾಗಿ ಮನುಷ್ಯ ಬಂದಿಷ್ಟು ಪ್ರಯಾಸ ಪಡಬೇಕಾಗುತ್ತದೆ. ಇದು ಮಾನಸಿಕವಾಗಿ ಹಾಗೂ ದೈಹಿಕವಾಗಿ ದೃಢವಾಗಿರುವ ಬೌದ್ಧಿಕ ವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಜಗತ್ತಿನೊಳಗೆ ಬಹಳಷ್ಟು ಜನ ಸತ್ಯಾನ್ವೇಷಕರು ಆಗಿಹೋಗಿದ್ದಾರೆ. ಈ ಸತ್ಯದರ್ಶಿಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಬಹುದು. ಅವರು, ೧) ವಿಜ್ಞಾನಿಗಳು, ೨) ತತ್ತ್ವಜ್ಞಾನಿಗಳು, ೩) ಕವಿಗಳು, ೪) ಅನುಭಾವಿಗಳು.

## ವಿಜ್ಞಾನಿಗಳು

ಕೆಲವರು ಕಣ್ಣನ್ನೇ ಸರಿಯಾಗಿ ಬಳಸಿಕೊಂಡು ಸತ್ಯ ಏನಿದೆ ಎಂದು ಕಂಡುಹಿಡಿಯಲು ಪ್ರಯತ್ನಿಸಿದರು. ಬಹಳ ಸೂಕ್ಷ್ಮವಾಗಿ